ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

Office of the Deputy Conservator of Forests, Sagar Forest Division, Sagar– 577401

Phone No. : 08183 226071 Email: Sagardcf@rediffmail.com

ಕ್ರ: ಬಿ/ಭೂಮಿ/ಎಫ್.ಸಿ/155505/2022/2022–23 ದಿನಾಂಕ: 09–06–2022

ಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು
ಶಿವಮೊಗ್ಗ ವೃತ್ತ, ಶಿವಮೊಗ್ಗ

ಮಾನ್ಯರೇ,

**Proposal No. FP/KA/RAIL/155505/2022**

ವಿಷಯ:– ಶಿಕಾರಿಪುರ ತಾಲ್ಲೂಕು ವ್ಯಾಪ್ತಿಯಲ್ಲಿ Construction of New BG Railway line in Forest Lands in Various Villages of Shimoga and Davangere District ಯೋಜನೆಗಾಗಿ 38.87 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸುವ ಕುರಿತು.

ಉಲ್ಲೇಖ:–
1. ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಕೆಯಾದ ಎಫ್.ಸಿ ಪ್ರಸ್ತಾವನೆ ಸಂಖ್ಯೆ: FP/KA/155505/2022
2. ಉಪ ಮುಖ್ಯ ಅಭಿಯಂತರರು, ನಿರ್ಮಾಣ ಘಟಕ, ನೈಋತ್ಯ ರೈಲ್ವೆ, ಯಾದವಗಿರಿ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: W.271/CN/MYS/SMET-RNR/FC ದಿನಾಂಕ: 30–05–2022.
3. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 03–06–2022
4. ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ: ಕ್ರ.ಸಂ ದಿನಾಂಕ :189/2022–23 ದಿನಾಂಕ: 08–06–2022
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿಕಾರಿಪುರ ಉಪ ವಿಭಾಗ, ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ: 199/2022–23 ದಿ: 08–06–2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು ವ್ಯಾಪ್ತಿಯಲ್ಲಿ Construction of New BG Railway line in Forest Lands in Various Villages of Shimoga and Davangere District in favour of Deputy Chief Engineer, Construction, South Western Railway, Mysuru ಯೋಜನೆಗಾಗಿ ಸಾಗರ ವಿಭಾಗ ವ್ಯಾಪ್ತಿಗೆ ಒಳಪಡುವ 6 ಗ್ರಾಮಗಳಿಂದ ಒಟ್ಟು 38.87 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹಾಗೂ ಶಿವಮೊಗ್ಗ ವಿಭಾಗ ವ್ಯಾಪ್ತಿಗೆ ಒಳಪಡುವ 9.04 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಉಪಯೋಗಿ ಸಂಸ್ಥೆಯಾದ ನೈರುತ್ಯ ರೈಲ್ವೆ, ಮೈಸೂರು ಇವರು ಉದ್ದೇಶಿಸಿರುತ್ತಾರೆ.

ಸದರಿ ಈ ಯೋಜನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯು ಸಮೀಕ್ಷೆಯನ್ನು ಕೈಗೊಂಡಿದ್ದು, ಸಮೀಕ್ಷೆಯ ಪ್ರಕಾರ ಸಾಗರ ಅರಣ್ಯ ವಿಭಾಗದ ಶಿಕಾರಿಪುರ ವಲಯದ ವ್ಯಾಪ್ತಿಯಲ್ಲಿ ಬರುವ 06

ಗ್ರಾಮಗಳಿಂದ ಒಟ್ಟು 38.87 ಹೆಕ್ಟೇರ್ ಅರಣ್ಯ ಪ್ರದೇಶವು ಬಳಕೆಯಾಗಲಿದೆ ಎಂದು ನಮೂದಿಸಿ ಉಲ್ಲೇಖ (1)ರಲ್ಲಿ ಪರಿವೇಶ್ ತಂತ್ರಾಂಶದಲ್ಲಿ ಸಾಗರ ಮತ್ತು ಶಿವಮೊಗ್ಗ ವಿಭಾಗದಲ್ಲಿ ಒಟ್ಟು 47.91 ಹೆಕ್ಟೇರ್ ಅರಣ್ಯ ಭೂಮಿ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (2)ರಲ್ಲಿ ಉಲ್ಲೇಖ (1)ರ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಪ್ರಸ್ತಾವನೆಯ ಸ್ಥಳ ಪರಿಶೀಲನೆಗಾಗಿ ವಿವರವನ್ನು ಒಳಗೊಂಡ 08 ಸೆಟ್‌ಗಳ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಉಲ್ಲೇಖ(3)ರಲ್ಲಿ ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರಿಗೆ ಸ್ಥಳ ಪರಿಶೀಲನೆಗಾಗಿ ಕಳುಹಿಸಲಾಗಿರುತ್ತದೆ. ಮುಂದುವರೆದು ವಲಯ ಅರಣ್ಯಾಧಿಕಾರಿ, ಶಿಕಾರಿಪುರ ವಲಯ, ಶಿಕಾರಿಪುರ ಇವರು ಉಲ್ಲೇಖ(4)ರಲ್ಲಿ ಸ್ಥಳ ಪರಿಶೀಲನಾ ವರದಿಯನ್ನು ಈ ಕಛೇರಿಗೆ ಸಲ್ಲಿಸಿದ್ದು, ಉಲ್ಲೇಖ(5)ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿಕಾರಿಪುರ ಉಪ ವಿಭಾಗ, ಶಿಕಾರಿಪುರ ಇವರು ಸ್ಥಳ ಪರಿಶೀಲನಾ ವರದಿಯನ್ನು ಅನುಮೋದಿಸಿರುತ್ತಾರೆ.

ಮುಂದುವರೆದು ಉಪಯೋಗಿ ಸಂಸ್ಥೆಯು ಅರಣ್ಯ ಭೂಮಿ ಬಿಡುಗಡೆಗೆ ಕೋರಿರುವ ಪ್ರದೇಶವನ್ನು ನಾನು ದಿನಾಂಕ 09-06-2022ರಂದು ಸ್ಥಳ ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ಮುಂದಿನ ಕ್ರಮಕ್ಕಾಗಿ ಒಪ್ಪಿಸುತ್ತಿದ್ದೇನೆ.

1. ಪ್ರಸ್ತಾವನೆಯ ಬುಕ್ ಲೆಟ್ ನಲ್ಲಿರುವಂತೆ ಶಿಕಾರಿಪುರ ವಲಯ ವ್ಯಾಪ್ತಿಯಲ್ಲಿ ಇರುವ ಯೋಜನಾ ಪ್ರದೇಶವು ಬರುವ ಅರಣ್ಯದ ಹೆಸರು, ಅಧಿಸೂಚನೆ ಸಂಖ್ಯೆ, ಅರಣ್ಯದ ಒಟ್ಟು ವಿಸ್ತೀರ್ಣ, ಡೈವರ್ಷನ್ ಆಗಲಿರುವ ಅರಣ್ಯದ ವಿಸ್ತೀರ್ಣವನ್ನು ಗ್ರಾಮವಾರು, ಸರ್ವೆ ನಂಬರ್‌ವಾರು ಮತ್ತು ಅಳತೆವಾರು ಹಾಗೂ ಇತರೆ ಮಾಹಿತಿಯೊಂದಿಗೆ ಸ್ಥಳ ಮಹಜರ್ ಜರುಗಿಸಿ ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

2. ಉಪಯೋಗಿ ಸಂಸ್ಥೆಯು ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಶಿಕಾರಿಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಹಾರೋಗೊಪ್ಪ ಗ್ರಾಮ ಸರ್ವೆ ನಂ. 11, 12 & 13 (6.29 ಹೆಕ್ಟೇರ್), ಯರೇಕಟ್ಟೆ ಗ್ರಾಮ ಸರ್ವೆ ನಂ 15 (10.50 ಹೆಕ್ಟೇರ್), ಇಟ್ಟಿಗೆಹಳ್ಳಿ ಸರ್ವೆ ನಂ. 81 & 28 (2.37 ಹೆಕ್ಟೇರ್), ತಿಮ್ಲಾಪುರ ಗ್ರಾಮ ಸರ್ವೆ ನಂ. 25 (4.96 ಹೆಕ್ಟೇರ್), ಧೂಪದಹಳ್ಳಿ ಗ್ರಾಮ ಸರ್ವೆ ನಂ. 27 & 49 (5.77 ಹೆಕ್ಟೇರ್) ಮತ್ತು ಸದಾಶಿವಪುರ ಗ್ರಾಮ ಸರ್ವೆ ನಂ. 32 (8.98 ಹೆಕ್ಟೇರ್) ಒಟ್ಟು 38.87 ಹೆಕ್ಟೇರ್ ಅರಣ್ಯ ಭೂಮಿ ಬಳಕೆಯಾಗಲಿದೆ ಎಂದು ತಿಳಿಸಿದ್ದು, ಸದರಿ ಗ್ರಾಮ, ಸರ್ವೇ ನಂಬರ್ ಹಾಗೂ ಬಳಕೆಯಾಗುವ ಅರಣ್ಯ ಪ್ರದೇಶದ ವಿಸ್ತೀರ್ಣದ ಬಗ್ಗೆ ಸ್ಥಳ ಪರಿಶೀಲಿಸಿ ನೋಡಲಾಗಿ ಪ್ರಸ್ತಾವನೆಗೂ ಸ್ಥಳದಲ್ಲಿರುವ ವಿಸ್ತೀರ್ಣಕ್ಕೂ ತಾಳೆಯಾಗುತ್ತಿದ್ದು, ಗ್ರಾಮ, ಸರ್ವೆ ನಂಬರ್, ಅರಣ್ಯ, ಅಧಿಸೂಚನೆ ಸಂಖ್ಯೆ ಮತ್ತು ವಿಸ್ತೀರ್ಣದ ಮಾಹಿತಿ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಗ್ರಾಮ | ಸರ್ವೆ ನಂಬರ್ | ಅರಣ್ಯ ಪ್ರದೇಶ | ಅಧಿಸೂಚನೆ ಸಂಖ್ಯೆ | ಸರ್ವೆ ನಂ. | ವಿಸ್ತೀರ್ಣ (ಹೆಕ್ಟೇರ್) |
|---|---|---|---|---|---|---|
| 1 | ಹಾರೋಗೊಪ್ಪ | 11 | ಕೆಸರಘಟ್ಟ ಟಿಂಬರ್ ರಿಸರ್ವ್ | No. VC 3940 Ft 10-22-01 Dt: 22-12-1923 | 11 | 1.62 |
| | | 12 | ಗಂಗವ್ವನಸರ ಎಸ್.ಎಫ್. | No. 23538 R3437 Dt: 19-06-1895 | 12 | 2.16 |
| | | 13 | ಹಾರೊಗೊಪ್ಪ ಎಂ.ಎಫ್. | No. G15100 Ft-109-27-38 Dt: 26-06-1929 | 13 | 2.51 |
| 2 | ಯರೇಕಟ್ಟೆ | 15 | ಗಂಗವ್ವನಸರ ಎಸ್.ಎಫ್. | No. 23538 R3437 Dt: 19-06-1895 | 15 | 10.50 |
| 3 | ಇಟ್ಟಿಗೆಹಳ್ಳಿ | 28 | ಶಾಸನಬದ್ಧ ಅರಣ್ಯ | FEE 185 FAF Dt: 05-05-2014 | 28 | 0.40 |
| | | 81 | ಇಟ್ಟಿಗೆಹಳ್ಳಿ ಸ್ಯಾಂಡಲ್ ರಿಸರ್ವ್ | No. IC. No. 1296 Ft. 39-22-22Dt: 24-08-1922 | 81 | 1.97 |

| | | | | | | |
|---|---|---|---|---|---|---|
| 4 | ತಿಮ್ಲಾಪುರ | 25 | ಇಟ್ಟಿಗೆಹಳ್ಳಿ ಸ್ಯಾಂಡಲ್ ರಿಸರ್ವ್ | No. IC. No. 1296 Ft. 39-22-22 Dt: 24-08-1922 | 25 | 4.96 |
| 5 | ಧೂಪದಹಳ್ಳಿ | 27 | ಕೆಂಗಟ್ಟೆ ಸ್ಯಾಂಡಲ್ ರಿಸರ್ವ್ | No. G7667 Ft 196-27-02 Dt 07-01-1928 | 27 | 5.74 |
| | | 49. | ಕೆಂಗಟ್ಟೆ ಸ್ಯಾಂಡಲ್ ರಿಸರ್ವ್ | No. G7667 Ft 196-27-02 Dt 07-01-1928 | 49 | 0.030 |
| 6 | ಸದಾಶಿವಪುರ | 32 | ಸದಾಶಿವಪುರ ಸ್ಯಾಂಡಲ್ ರಿಸರ್ವ್ | No. IC 2958 Ft 112-21-2 date: 18-12-1921 | 32 | 8.98 |
| | | | | 6 ಗ್ರಾಮಗಳಿಂದ ಒಟ್ಟು ವಿಸ್ತೀರ್ಣ | | 38.87 |

3. ಉಪಯೋಗಿ ಸಂಸ್ಥೆಯವರು ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಶಿವಮೊಗ್ಗ ವಿಭಾಗ ಹಾಗೂ ಸಾಗರ ವಿಭಾಗ ವ್ಯಾಪ್ತಿಗೆ 30 ಗ್ರಾಮಗಳನ್ನು ಗುರುತಿಸಿದ್ದು ಸಾಗರ ವಿಭಾಗದ ಶಿಕಾರಿಪುರ ವಲಯ ವ್ಯಾಪ್ತಿಗೆ ಎಳನೀರಕೊಪ್ಪ, ಕೆಸರಘಟ್ಟ, ಹಾರೊಗೋಪ್ಪ, ಯರೆಕಟ್ಟೆ, ಇಟ್ಟಿಗೆಹಳ್ಳಿ, ತಿಮ್ಲಾಪುರ, ದೂಪದಹಳ್ಳಿ, ಬೇಗೂರು, ಹಳಿಯೂರು ಮತ್ತು ಸದಾಶಿವಪುರ ಒಟ್ಟು=10 ಗ್ರಾಮಗಳು ಬರುತ್ತಿದ್ದು, ಅದರಲ್ಲಿ ಹಾರೋಗೋಪ್ಪ, ಯರೆಕಟ್ಟೆ, ಇಟ್ಟಿಗೆಹಳ್ಳಿ, ತಿಮ್ಲಾಪುರ, ದೂಪದಹಳ್ಳಿ, ಸದಾಶಿವಪುರ 6 ಅರಣ್ಯ ಗ್ರಾಮಗಳಿದ್ದು ಅವುಗಳಿಂದ 38.87ಹೆ ಅರಣ್ಯಪ್ರದೇಶ ಪ್ರಸ್ತಾವನೆಗೆ ಒಳಪಡುತ್ತದೆ.
4. ಪ್ರಸ್ತಾವನೆ ಬುಕ್‌ಲೆಟ್‌ನಲ್ಲಿ ನಮೂದಿಸಿದಂತೆ ಉದ್ದೇಶಿತ ರೈಲು ಮಾರ್ಗದ ಗಡಿಕಲ್ಲು ಪರಿಶೀಲಿಸಿ ಅದರ ಜಿ.ಪಿ.ಎಸ್ ರೀಡಿಂಗ್ ಪಡೆದು ಬುಕ್‌ಲೆಟ್‌ನ ನಕಾಶೆಯಲ್ಲಿನ ಜಿ.ಪಿ.ಎಸ್ ರೀಡಿಂಗ್‌ನೊಂದಿಗೆ ತಾಳೆಮಾಡಿ 6 ಗ್ರಾಮಗಳ ಮ್ಯಾಪ್ ಸೋರ್ಸ್ ನಕ್ಷೆ ಹಾಗೂ ಗೂಗಲ್ ನಕ್ಷೆಯನ್ನು ತಯಾರಿಸಿ ಸಲ್ಲಿಸಿದೆ.
5. ಉಪಯೋಗಿ ಸಂಸ್ಥೆಯು ಸಲ್ಲಿಸಿರುವ ಯೋಜನಾ ನಕಾಶೆ ಪ್ರಕಾರ 38.87 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಒಟ್ಟು 3862 ಮರಗಳು ಇದ್ದು, ಇವುಗಳನ್ನು ಕಾಮಗಾರಿ ನಡೆಸುವ ಸಮಯದಲ್ಲಿ ಕಟಾವಣೆ ಮಾಡ ಬೇಕಾಗಿರುತ್ತದೆ. (ನಮೂನೆ-2 ಮರಗಳ ಸುತ್ತಳತೆವಾರು ಪಟ್ಟಿಯನ್ನು ಲಗತ್ತಿಸಿದೆ)
6. ಪ್ರಸ್ತಾಪಿತ ಯೋಜನಾ ಪ್ರದೇಶದ 16.79 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಮರಗಳ ದಟ್ಟಣೆಯು 0.4 ಇದ್ದು ಉಳಿದ 22.08 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಮರಗಳ ದಟ್ಟಣೆಯು 0.1 ಇರುತ್ತದೆ. ಎಫ್.ಸಿ ಗೈಡ್ ಲೈನ್ಸ್ ಪ್ರಕಾರ Eco class-3: Tropical Dry Decideous forests ನ Open forest ವ್ಯಾಪ್ತಿಗೆ ಬರುತ್ತದೆ. ಹಾಗೂ ಸದರಿ ಯೋಜನೆಯ ಬಗ್ಗೆ ಅನುಮೋದಿತ ಕಾರ್ಯಯೋಜನೆಯಲ್ಲಿ ಪಥ ಬದಲಾವಣೆಯ ಬಗ್ಗೆ ಪ್ರಸ್ತಾಪಿರುವುದಿಲ್ಲ.
7. ಯೋಜನಾ ಪ್ರದೇಶವನ್ನು ಪರಿಷ್ಕೃತ ನಕಾಶೆಯ ಪ್ರಕಾರ ಪರಿಶೀಲಿಸಲಾಗಿ ಸದರಿ ಪ್ರದೇಶವು ಶೇಕಡ 0–15%ರಷ್ಟು ಇಳಿಜಾರು ಹೊಂದಿದ್ದು, ಪ್ರಸ್ತಾಪಿತ ಯೋಜನೆ ಜಾರಿಗೊಳಿಸುವುದರಿಂದ ಮಣ್ಣಿನ ಸವಕಳಿಯಾಗುವುದಿಲ್ಲ.
8. ಪ್ರಸ್ತಾಪಿತ ಯೋಜನೆ ಪ್ರದೇಶದ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ವನ್ಯಜೀವಿಗಳಾದ ಚಿರತೆ (*Panthera Pardus*), ಕರಡಿ (*Melursus ursinus*), ಕತ್ತೆಕಿರುಬ (*Hyaena hyaena*), ನರಿ (*Vulpes bengalensis*) ಹಾಗೂ ಜಿಂಕೆ (*Axis axis*), ಕಡವೆ (*Cervus unicolor*), ಕಾಡುಕುರಿ (*Muntiacus muntjac*), ಕಾಡುಹಂದಿ (*Sus scrofa*), ಕಾಡುಬೆಕ್ಕು (*Felis Silvestris*)ಹಾಗೂ ಇತ್ಯಾದಿ ಸ್ಥಳಿಯ ಸರಿಸೃಪಗಳು ಹಾಗೂ ಸಸ್ತನಿಗಳು ಹಾಗೂ ಪಕ್ಷಿವರ್ಗಗಳಾದ ನವಿಲು (*Tavo Cristatus*), ನೀಲಕಂಠ (*Indian Roller*), ಮಿಂಚುಳ್ಳಿ (*Ceyx Azureus*), ಗಿಳಿ (*Prittocula*

*kramri*), ಮೈನಾ (*Indian Myna*), ಹದ್ದು (*Milvus Migranus*), ಕಾಡುಕೋಳಿ (*Gallus gallus*), ಕೋಗಿಲೆ (*Edynamys Scolopaceus*) ಇತ್ಯಾದಿ ಸಾಮಾನ್ಯ ಪಕ್ಷಿಗಳು ಕಂಡು ಬರುತ್ತವೆ. ಅವನತಿ ಹಂತದಲ್ಲಿನ ಸಸ್ಯವರ್ಗ ಅಥವಾ ವನ್ಯ ಪ್ರಬೇಧ ಕಂಡುಬರುವುದಿಲ್ಲ. ಆರ್ಕಿಲೋಜಿಕಲ್/ಹೆರಿಟೇಜ್ ಸದರಿ ಪ್ರಸ್ತಾಪಿತ ಯೋಜನೆಯ ಹತ್ತಿರದಲ್ಲಿ ಯಾವುದು ಇರುವುದಿಲ್ಲ. ಹೆಚ್ಚಿನ ಯೋಜನಾ ಪ್ರದೇಶ ಅರಣ್ಯದ ಪೂರ್ವದಲ್ಲಿ ಇರುವ ಕಾರಣ ವನ್ಯಪ್ರಾಣಿಗಳ ಹೆಚ್ಚಿನ ಆವಾಸ ಸ್ಥಾನ (Habitat) ನಶಿಸುವುದಿಲ್ಲ.

9. ಪ್ರಸ್ತಾಪಿತ ಯೋಜನೆಗೆ ಉದ್ದೇಶಿಸಿದ ಪ್ರದೇಶ ವನ್ಯಜೀವಿ ಅಭಯಾರಣ್ಯದ ಗಡಿಯೊಳಗೆ ಅಥವಾ ಗಡಿಯಿಂದ 1 ಕಿ.ಮೀ ವ್ಯಾಪ್ತಿಗೆ ಬರುವುದಿಲ್ಲ, ಸದರಿ ಉದ್ದೇಶಿಸಿದ ಯೋಜನಾ ಪ್ರದೇಶದಿಂದ ರಾಣೆಬೆನ್ನೂರು ಕೃಷ್ಣ ಮೃಗ ಅಭಯಾರಣ್ಯ (Black buck Sanctury) ಸುಮಾರು ವೈಮಾನಿಕವಾಗಿ 40 ಕಿ.ಮೀ ದೂರವಿರುತ್ತದೆ.
10. ಪ್ರಸ್ತಾಪಿತ ಯೋಜನೆಗೆ ಉದ್ದೇಶಿಸಿದ ಪ್ರದೇಶದ ನಕ್ಷೆಯ ಪ್ರಕಾರ ಸದರಿ ಪ್ರದೇಶವು ವನ್ಯಜೀವಿ ಅಭಯಾರಣ್ಯದ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ.
11. ಪ್ರಸ್ತಾಪಿತ ಯೋಜನೆಯನ್ನು ಕೈಗೊಳ್ಳಲು ಸಾಗರ ವಿಭಾಗ ವ್ಯಾಪ್ತಿಯಲ್ಲಿ 38.87 ಹೆಕ್ಟೇರ್ ಅರಣ್ಯ ಭೂಮಿ ಕನಿಷ್ಟ ಅವಶ್ಯಕತೆ ಇರುತ್ತದೆ. ಯೋಜನೆಗೆ ಸಂಬಂಧಿಸಿದಂತೆ ಸದರಿ ಪ್ರದೇಶದಲ್ಲಿ ಅರಣ್ಯ ಕಾಯ್ದೆ ಹಾಗೂ ನಿಯಮ ಇತರೆ ಸುತ್ತೋಲೆಗಳ ಯಾವುದೇ ಉಲ್ಲಂಘನೆಯಾಗುವುದಿಲ್ಲ.
12. ಪ್ರಸ್ತಾಪಿತ ಯೋಜನೆಗೆ ಸಂಬಂಧಿಸಿದಂತೆ, ಸದರಿ ಯೋಜನೆಯು ಶಿಕಾರಿಪುರ ತಾಲ್ಲೂಕಿಗೆ ಅವಶ್ಯವಿದ್ದು ಜನಸಾಮಾನ್ಯರಿಗೆ ಅನುಕೂಲವಾಗಲಿದೆ. ಈ ಯೋಜನೆಯ ಅನುಷ್ಠಾನದಿಂದ ವಾಯುಮಾಲಿನ್ಯ ಹಾಗೂ ಇಂಧನ ವ್ಯಯವನ್ನು ಕಡಿಮೆಮಾಡಬಹುದಾಗಿದೆ. ಪ್ರಸ್ತುತ ಶಿಕಾರಿಪುರ ತಾಲ್ಲೂಕು ಜನಸಂಖ್ಯೆ 2011 ಜನಗಣತಿ ಪ್ರಕಾರ 280000 ಇದ್ದು ರಸ್ತೆಯಲ್ಲಿ ವಾಹನ ದಟ್ಟಣೆ ಅತೀ ಹೆಚ್ಚಾಗಿದ್ದು ರೈಲು ಮಾರ್ಗ ಆಗುವುದರಿಂದ ವಾಹನ ದಟ್ಟಣೆ ಕಡಿಮೆಯಾಗಿ ವಾಯುಮಾಲಿನ್ಯ ಕಡಿಮೆಯಾಗುವುದರ ಜೋತೆಗೆ ಇಂಧನದ ಬಳಕೆ ಕಡಿಮೆಯಾಗುತ್ತದೆ. ಪ್ರಸ್ತಾಪಿತ ಯೋಜನೆಯಿಂದ ಅರಣ್ಯ ಪ್ರದೇಶದ ಸಸ್ಯ ಸಂಕುಲ ಹಾಗೂ ಪ್ರಾಣಿ ಸಂಕುಲಕ್ಕೆ ಹೆಚ್ಚಿನ ತೊಂದರೆ ಆಗದ ಕಾರಣ ಯೋಜನೆಗೆ ಶಿಫಾರಸ್ಸು ಮಾಡಬಹುದಾಗಿದೆ
13. ಸ್ಥಳ ಪರಿಶೀಲನಾ ದಾಖಲೆಗಳನ್ನು ಮತ್ತು ಛಾಯಾಚಿತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.
14. Wildlife Mitigation Plan: ಪ್ರಸ್ತಾಪಿತ ಯೋಜನಾ ಪ್ರದೇಶದಲ್ಲಿ ರೈಲುಗಳ ಒಡಾಟದಿಂದಾಗಿ ಸಮೀಪದ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ವನ್ಯಪ್ರಾಣಿಗಳ ಅಪಘಾತ ತಪ್ಪಿಸಲು ಮತ್ತು ವನ್ಯಪ್ರಣಿಗಳ ಒಡಾಟಕ್ಕೆ ಅನುಕೂಲವಾಗುವಂತೆ ಈ ಕೆಳಕಂಡ ತಡೆಗೋಡೆ/ಅಂಡರ್ ಪಾಸ್ ಅವಶ್ಯವಿರುತ್ತದೆ. ಒಟ್ಟು ಚೈನ್‌ಲಿಂಕ ಬೀಲಿ=3280ಮೀ ಹಾಗೂ 03 ಅಂಡರ್ ಪಾಸ್ ಅವಶ್ಯವಿರುತ್ತದೆ. ಮತ್ತು Wildlife Mitigation Plan ವರದಿಯನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಸಿದೆ.
15. ಉಪಯೋಗಿ ಸಂಸ್ಥೆಯು ಸಲ್ಲಿಸಿರುವ ನಕಾಶೆ ಮತ್ತು ಮಾಹಿತಿಯಂತೆ ಸದರಿ ಯೋಜನೆಯಲ್ಲಿ ಡೈವರ್ಷನ್ ಆಗಲಿರುವ ಅರಣ್ಯ ಪ್ರದೇಶ ಸ್ಥಳ ಪರಿಶೀಲನೆ ಪ್ರಕಾರ ವಿಸ್ತೀರ್ಣವು ಸರಿ ಹೊಂದಿದ್ದು, ಮೊಹರಿನೊಂದಿಗೆ ಸಂಬಂಧಿಸಿದ ಪರಿಷ್ಕೃತ ಯೋಜನಾ ನಕಾಶೆಗಳಲ್ಲಿ ಇಂಕ್ ಸಹಿಯನ್ನು ಮಾಡಲಾಗಿದೆ.

**ಪರಿಹಾರಾತ್ಮಕ ನೆಡುತೋಪು ಮಾಹಿತಿ**

ಈ ಯೋಜನೆಗೆ ಪರ್ಯಾಯವಾಗಿ ಪರಿಹರಾತ್ಮಕ ನೆಡುತೋಪು ಬೆಳಸುವ ಸಲುವಾಗಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲೂಕಿನ ವಲಯದ ಅಂಜನಾಪುರ ಹೋಬಳಿಯ ಶಿಡಿಗಿನಹಾಳು ಗ್ರಾಮ ಸರ್ವೆ ನಂಬರ್ 1 ರಲ್ಲಿರುವ ಗಂಗವ್ವನಸರ ರಾಜ್ಯ ಅರಣ್ಯ ಪ್ರದೇಶದಲ್ಲಿ ಪರಿಹರಾತ್ಮಕ ನೆಡುತೋಪನ್ನು ಬೆಳೆಸಲು 77.74 ಹೆಕ್ಟರ್ ಪ್ರದೇಶವನ್ನು ಗುರುತಿಸಲಾಗಿದೆ.

1. ಸದರಿ ಪ್ರದೇಶವು ಡಿಗ್ರೇಡೆಡ್ ಅರಣ್ಯ ಪ್ರದೇಶವಾಗಿದ್ದು, ಅರಣ್ಯ ಹೊದಿಕೆಯು 40% ಗಿಂತ ಕಡಿಮೆ ಇರುತ್ತದೆ. ಪರಿಹರಾತ್ಮಕ ನೆಡುತೋಪು ಬೆಳೆಸುವ ಪ್ರದೇಶದಲ್ಲಿ Red Loamy Soil ಇದ್ದು, ಸದರಿ ಸ್ಥಳದಲ್ಲಿ ಅಂದಾಜು ವಾರ್ಷಿಕ 200mm ರಷ್ಟು ಮಳೆ ಆಗುತ್ತದೆ. ಅರಣ್ಯದ ಅಧಿಸೂಚನೆ ಸಂಖ್ಯೆ: No:23538.R.3437 Date:19-06-1895 ಆಗಿರುತ್ತದೆ.

2. ಪರಿಹಾರತ್ಮಕ ನೆಡುತೋಪು ಬೆಳೆಸುವ ಸ್ಥಳವನ್ನು 1cm=79.2m ಅಳತೆಯ ಗ್ರಾಮ ನಕಾಶೆಯಲ್ಲಿ ಜಿಯೋ–ರೆಫರೆನ್ಸ್ ಮಾಡಿ ಗಡಿ ಗುರುತಿಸಿ ಇಂಡೆಕ್ಸ್ ನಲ್ಲಿ ಯೋಜನೆಯ ವಿವರ, ಸ್ಥಳದ ಎಲ್ಲಾ ಮೂಲೆಗಳ ಜಿಪಿಎಸ್ ನಿರ್ದೇಶಾಂಕಗಳನ್ನು (WGS-84/hddd.dddd) ಗಳನ್ನು ನಮೂದಿಸಿ ನಕಾಶೆಯನ್ನು 07 ಪ್ರತಿಯಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ.

3. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಡಿಗ್ರೇಡೆಡ್ ಅರಣ್ಯ ಪ್ರದೇಶವನ್ನು 1=50.000 ಅಳತೆಯ ಟೋಪೋ ನಕಾಶೆಯಲ್ಲಿ ಗುರುತಿಸಿ, ಆ ನಕಾಶೆಯಲ್ಲಿ ಜಿ.ಪಿ.ಎಸ್ (WGS-84/hddd.dddd) ಪಾಯಿಂಟ್ಸ್‌ಗಳನ್ನು ನಮೂದಿಸಿ ನಕಾಶೆಯನ್ನು 07 ಪ್ರತಿಯಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ.

4. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಡಿಗ್ರೇಡೆಡ್ ಅರಣ್ಯ ಪ್ರದೇಶದ ಜಿ.ಪಿ.ಎಸ್ ಪಾಯಿಂಟ್ಸ್‌ಗಳನ್ನು ಗೂಗಲ್ ಅರ್ಥ ತಂತ್ರಾಂಶದಲ್ಲಿ ನಕಾಶೆ ತಯಾರಿಸಿ 07 ಪ್ರತಿಯಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ.

5. ಸದರಿ ಡಿಗ್ರೇಡೆಡ್ ಅರಣ್ಯ ಪ್ರದೇಶವು ಪರಿಹರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿದ್ದು, ಈ ಬಗ್ಗೆ CA Suitability Certificate (Format-C) ಅನ್ನು ಒದಗಿಸಿದೆ.

6. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಡಿಗ್ರೇಡೆಡ್ ಅರಣ್ಯ ಪ್ರದೇಶವಾಗಿದ್ದು, ಸದರಿ ಪ್ರದೇಶವು ಒಂದೇ ಕಡೆ ಲಭ್ಯವಾಗಿದೆ. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಡಿಗ್ರೇಡ್ ಅರಣ್ಯ ಪ್ರದೇಶದ ಸ್ಥಳದ ಬಗ್ಗೆ ಮಾಹಿತಿಯು ಈ ಮುಂದಿನಂತಿದೆ ಇದೆ.

| Sl No. | No of patches | Division | Patch No | Name of PF/RF/Others | Taluk | Hobli | Village Name | Compartment No/Any identification No | Area (ha) | Range | Sy No | GPS Reading of Patches (WGS-84/hddd.dddd | KML File of patches | Remarks |
|---|---|---|---|---|---|---|---|---|---|---|---|---|---|---|
| I | I | Sagar | 1 | Gangavva nasara SF | Shikaripura | Anjanapura | Shidiginhalu | No:23538.R.3437 Date:19-06-1895 | 77.74 | Shikaripura | 1 | Enclosed | attached | Degraded Notified forest |

ಆದ್ದರಿಂದ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಘಟಕಾಧಿಕಾರಿಗಳು ಸಲ್ಲಿಸಿರುವ ಪರಿಶೀಲನಾ ವರದಿಯನ್ನು ನಾನೂ ಸಹ ಅನುಮೋದಿಸುತ್ತಾ, Site Inspection Report & Recommendation Letter, CA Scheme ಹಾಗೂ ಅರಣ್ಯ ಭೂಮಿ ಬಿಡುಗಡೆಗೆ ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಪ್ರದೇಶದ ವಿವರವನ್ನು ಒಳಗೊಂಡ 07 ಸೆಟ್ ಬುಕ್‌ಲೆಟ್‌ಗಳನ್ನು ಈ ಲಗತ್ತು ಸಲ್ಲಿಸುತ್ತಾ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಪ್ರಕಾರ ಅರಣ್ಯ ಭೂಮಿ ಬಿಡುಗಡೆಗೆ ಪೂರ್ವಾನುಮತಿ ನೀಡುವ ಬಗ್ಗೆ ಪ್ರಸ್ತಾವನೆಯನ್ನು ತಮ್ಮ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.